**ಓ.ಎಸ್. ನಂ. 62/2021** **ಪಿ.ಡಬ್ಲ್ಯೂ- 1**

<u>ಸಾಕ್ಷಿಯನ್ನು ದಿನಾಂಕ **14.10.2022** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಹತ್ತನೇ ತರಗತಿ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ಪ್ರತಿವಾದಿಗಳು ನನಗೆ 1999 ರಿಂದ ಪರಿಚಯ. ದಾವಾಸ್ವತ್ತು ಕೃಷ್ಣಯ್ಯ ರವರಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಕೃಷ್ಣಯ್ಯ ರವರಿಗೆ 6 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ನನಗೆ ಕರಾರುಪತ್ರವನ್ನು ಕೃಷ್ಣಯ್ಯ ರವರ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಬರೆದುಕೊಟ್ಟಿರುತ್ತಾರೆ. ಕೃಷ್ಣಯ್ಯ ರವರಿಗೆ ಕೃಷ್ಣಯ್ಯ ಮತ್ತು ಕೃಷ್ಣದಾಸಯ್ಯ ಎಂಬ ಮಕ್ಕಳಿರುವ ಬಗ್ಗೆ ನನಗೆ ತಿಳಿದಿರುತ್ತದೆ. ಕೃಷ್ಣಯ್ಯ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಕೃಷ್ಣಯ್ಯ ರವರಿಗೆ ಸಾವಿತ್ರಮ್ಮ, ಜಗದೀಶ, ಗೋಪಾಲ ಮತ್ತು ಗೋವಿಂದ ಎಂಬ ಮಕ್ಕಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕೃಷ್ಣದಾಸಯ್ಯ ರವರು ಜೀವಂತವಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಕೃಷ್ಣಯ್ಯ ರವರಿಗೆ ದರಕಾಸ್ತು ಮೂಲಕ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ.

ಪ್ರತಿವಾದಿಗಳು ಕರಾರುಪತ್ರ ಬರೆದುಕೊಡುವಾಗ ಮೂಲ ದಾಖಲೆಗಳನ್ನು ಪತ್ರ ಬರಹಗಾರರಿಗೆ ನೀಡಿರುತ್ತಾರೆ, ಆದರೆ ನಾನು ನೋಡಿರುವುದಿಲ್ಲ. ನಿಪಿ3 ಬರೆದ ದಿನ ಬೇರೆ ಯಾವುದೇ ದಾಖಲೆ ಯಾಗಿರುವುದಿಲ್ಲ. ಸಾಕ್ಷಿಗೆ ದಿನಾಂಕ 30.11.2019 ರ ಒಪ್ಪಂದ ಕರಾರು ಪತ್ರ ತೋರಿಸಿ ಅದರಲ್ಲಿ ಖರೀದಿದಾರರು ಎಂದು ಇರುವ ಸಹಿ ನನ್ನ ಸಹಿ ಎಂದರೆ ಹೌದು ಎನ್ನುವರು. ಸದರಿ ದಾಖಲೆಯನ್ನುನಿಡಿ1 ಎಂದು, ಸಾಕ್ಷಿ ಸಹಿಯನ್ನು ನಿಡಿ1 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆ ಮೂಲ ಪ್ರತಿ ನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನಿಡಿ1 ಮೂಲ ಪ್ರತಿ ಯಾರ ಬಳಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ1 ನ್ನು ನಾನೇ ಸೃಷ್ಟಿ ಮಾಡಿ ಅದನ್ನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬೋಗ್ಯಪತ್ರ ಹೊರತುಪಡಿಸಿ ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಹಣಕಾಸು ವ್ಯವಹಾರ ನಡೆದಿರುವುದಿಲ್ಲ.

ನನ್ನ ಸ್ವಂತ ಗ್ರಾಮ ಶಿರಮಹಳ್ಳಿ, ಪ್ರತಿವಾದಿಗಳ ಗ್ರಾಮ ತುಂಬಸೋಗೆ. ದಾವಾಸ್ವತ್ತು ನಿಲುವಾಗಿಲು ಗ್ರಾಮದಲ್ಲಿರುತ್ತದೆ. ದಾವಸ್ವತ್ತಿನ ಚಕ್ಕುಬಂದಿಯನ್ನು ನಾನು ಮತ್ತು ಪ್ರತಿವಾದಿಗಳು ಹೇಳಿರುತ್ತೇವೆ. ಪ್ರತಿವಾದಿಗಳು ಏನು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಬಸವಯ್ಯ ರವರು ನನ್ನ ತಂದೆ. ದಿನಾಂಕ 5.12.2000 ರಲ್ಲಿ ನನ್ನ ತಂದೆ 3 ನೇ ಪ್ರತಿವಾದಿಗೆ 25 ಸಾವಿರ ಹಣವನ್ನು ಸಾಲವಾಗಿ ನೀಡಿ ಒಪ್ಪಂದ ಕರಾರುಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 16.4.2006 ರಂದು ನನ್ನ ತಂದೆ 1 ನೇ ಪ್ರತಿವಾದಿಗೆ 24 ಸಾವಿರ ಹಣವನ್ನು ನೀಡಿದ್ದು ಅದರ ಭದ್ರತೆಗಾಗಿ ಒಪ್ಪಂದ ಕರಾರುಪತ್ರ ಬರೆಸಿಕೊಂಡಿರುತ್ತಾರೆ, ಸದರಿ ಹಣವನ್ನು ಅವರು ಹಿಂದಿರುಗಿಸಿದ ನಂತರ ಸದರಿ ಮೂಲ ದಾಖಲೆಯನ್ನು 1 ನೇ ಪ್ರತಿವಾದಿಗೆ ನನ್ನ ತಂದೆ ಹಿಂದಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಗಂಡ ನನ್ನ ಬಳಿ 1 ಲಕ್ಷ

ಹಣವನ್ನು ಪಡೆದುಕೊಂಡಾಗ ನಾನು ಆತನಿಂದ ಪ್ರೊನೋಟ್ ಪಡೆದು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಹಿಂದಿರುಗಿಸಿದಾಗ ನಾನು ಪ್ರೊನೋಟ್ ನ್ನು 8 ನೇ ಪ್ರತಿವಾದಿ ಗಂಡನಿಗೆ ಹಿಂದಿರುಗಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 25.2.2009 ರಂದು 8 ನೇ ಪ್ರತಿವಾದಿ ಗಂಡ ನನ್ನ ತಂದೆಯಿಂದ 1 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಾಗ ನನ್ನ ತಂದೆ ಕರಾರು ಪತ್ರ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 2.3.2009 ಮತ್ತು 3.3.2009 ರಂದು 3 ಮತ್ತು 8 ನೇ ಪ್ರತಿವಾದಿ ನನ್ನ ಬಳಿ 1.15 ಲಕ್ಷ ಹಣವನ್ನು ಪಡೆದುಕೊಂಡಾಗ ನಾನು ಬೋಗ್ಯದ ಕರಾರುಪತ್ರ ಮತ್ತು ಆನ್ ಡಿಮ್ಯಾಂಡ್ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಕೃಷ್ಣಯ್ಯ ರವರಿಗೆ ಕೃಷ್ಣಯ್ಯ ಮತ್ತು ಕೃಷ್ಣದಾಸಯ್ಯ ಮಕ್ಕಳಿರುವ ಬಗ್ಗೆ ತಿಳಿದಿರುತ್ತದೆ. ಅವರು ದಾವಾಆಸ್ತಿಗೆ ಬರುವುದಿಲ್ಲ ಎಂದು ತಿಳಿಸಿರುತ್ತಾರೆ ಮತ್ತು ಬೇರೆ ಕಡೆ ಅವರಿಗೆ ಆಸ್ತಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆ ಕಾರಣ ಅವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ಸದರಿ ವ್ಯಕ್ತಿಗಳಿಗೆ ಯಾವ ಸ್ವತ್ತು ನೀಡಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಸ್ವತ್ತು ಹೊರತುಪಡಿಸಿ ಪ್ರತಿವಾದಿಗಳಿಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ದಾವೆ ಹೂಡುವ 2-3 ತಿಂಗಳ ಪೂರ್ವದಲ್ಲಿ ನಾನು ತಿಳುವಳಿಕೆ ನೋಟಿಸನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ. ಆಕಾರಬಂಧು ಮತ್ತು ಪಹಣಿಯನ್ನು ಹಾಜರುಪಡಿಸಲು ನಾನು 1 ವರ್ಷ ಕಾಲ ನಿಗದಿ ಮಾಡಿರುತ್ತೇನೆ. ನಕಾಶೆಯನ್ನು ಮಾಡಲು 11 ತಿಂಗಳ ಕಾಲಾವಕಾಶ ನಿಗದಿ ಮಾಡಲಾಗಿರುತ್ತದೆ. ದಾವಾಆಸ್ತಿ ದರಖಾಸ್ತು ಮೂಲಕ ಮಂಜೂರಾದ ಕಾರಣ ಅದು ದುರಸ್ತಿಯಾಗಿರುವುದಿಲ್ಲ ಎಂದರೆ ಸರಿ.

ನಿಪಿ1 ನ್ನು ನಾಗರಾಜು ಮತ್ತು ಅವರ ಮಕ್ಕಳು ಬರೆದುಕೊಟ್ಟಿರುತ್ತಾರೆ. ಮೊದಲು ಪ್ರತಿವಾದಿಗಳು ಹಣ ಪಡೆದುಕೊಂಡಾಗ ನಾವು ಅವರಿಗೆ ತಿಳಿಯದಂತೆ ನಿಪಿ1 ಮತ್ತು ನಿಪಿ2 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ3 ರ ಕಾಲಕ್ಕೆ ದಾವಾಸ್ವತ್ತಿನ ಸ್ವಾಧೀನವನ್ನು ಬೋಗ್ಯದ ಆಧಾರದ ಮೇಲೆ ಹೊಂದಿರುತ್ತೇನೆ. ನಿಪಿ1 ಮತ್ತು 2 ನ್ನು ಹೊರತುಪಡಿಸಿ ಬೇರೆ ಯಾವುದೇ ಬೋಗ್ಯ ಪತ್ರವಾಗಿರುವುದಿಲ್ಲ. ಸಾಕ್ಷಿಗೆ ದಿನಾಂಕ 28.3.2013 ರ ಬೋಗ್ಯಪತ್ರವನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದಾ ಎಂದರೆ ಹೌದು ಎನ್ನುವರು. ಸದರಿ ದಾಖಲೆಯನ್ನು ನಿಡಿ2 ಎಂದು, ಸಾಕ್ಷಿ ಸಹಿಯನ್ನು ನಿಡಿ2 ಎ ಎಂದು ಗುರುತಿಸಲಾಯಿತು. ನಿಪಿ2 ರ ಮೂಲಕ ನಾನು ಯಾವುದೇ ಹಣವನ್ನು ಪ್ರತಿವಾದಿಗಳಿಗೆ ನೀಡಿರುವುದಿಲ್ಲ. ನಿಪಿ3 ರಲ್ಲಿ ನಿಪಿ1 ಮತ್ತು ನಿಪಿ2 ರ ದಾಖಲೆ ಬಗ್ಗೆ ನಮೂದು ಮಾಡಲಾಗಿರುತ್ತದೆ. ನಿಡಿ2 ರ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಿಪಿ3 ರಲ್ಲಿ ದಾವಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗಳು ಹೊಂದಿರುವ ಬಗ್ಗೆ ಎಂದು ನಮೂದು ಮಾಡಲಾಗಿರುತ್ತದೆ.

ನನಗೆ ಕಾಟನ್ ಮಹದೇವಪ್ಪ ರವರ ಪರಿಚಯವಿರುತ್ತದೆ. ಅವರು ಹತ್ತಿ ವ್ಯಾಪಾರ, ರಿಯಲ್ ಎಸ್ಟೇಟ್ ಮತ್ತು ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ3 ಕ್ಕೆ ಮುತ್ತಯ್ಯ, ಮಹದೇವಪ್ಪ ಮತ್ತು ಮರೀಗೌಡ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಮರೀಗೌಡ ಸಾಕ್ಷಿಯನ್ನು ನಾನು ಬರ

ಮಾಡಿಕೊಂಡಿರುತ್ತೇನೆ, ಉಳಿದ ಸಾಕ್ಷಿಗಳನ್ನು ಪ್ರತಿವಾದಿಗಳು ಬರ ಮಾಡಿಕೊಂಡಿರುತ್ತಾರೆ. ಪ್ರತಿವಾದಿಗಳು ದಾವಸ್ವತ್ತನ್ನು ಮಾರಾಟ ಮಾಡಿಕೊಡುತ್ತೇನೆ ಎಂದು ಹೇಳಿ ನಿಪಿ3 ನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತುತ ಕಾಟನ್ ಮಹದೇವಪ್ಪ ರವರು ಪ್ರತಿವಾದಿ ಜಮೀನಿನಲ್ಲಿ ಶುಂಠಿ ಬೆಳೆಯುತ್ತೇವೆ, ವರ್ಷಕ್ಕೆ ಹಣ ನೀಡುವುದಾಗಿ ಕರಾರುಪತ್ರ ಬರೆದುಕೊಡುತ್ತೇವೆ ಎಂದು ಹೇಳಿ ಪ್ರತಿವಾದಿಗಳನ್ನು ಉಪನೋಂದಣಾಧಿಕಾರಿ ಕಛೇರಿಗೆ ಬರಮಾಡಿಕೊಂಡು ನಿಪಿ3 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಸ್ವತ್ತಿನಲ್ಲಿ ನಾನು ಬೋರವೆಲ್ ತೆಗೆಸಿರುವುದಿಲ್ಲ. ದಾವಸ್ವತ್ತಿನಲ್ಲಿ ಬೋರವೆಲ್ ಇರುವುದಿಲ್ಲ. ನನಗೆ ಭಾನುಪ್ರಕಾಶ್ ರವರ ಪರಿಚಯವಿದೆ. ನಾನು ಅವರಿಗೆ ಸೇರಿದ ಜಮೀನನ್ನು ಬೋಗ್ಯಕ್ಕೆ ಪಡೆದುಕೊಂಡಿರುವುದಿಲ್ಲ. ಪ್ರತಿವಾದಿಗಳು ಅಕ್ರಮವಾಗಿ ನಾನು ಬೋರವೆಲ್ ತೆಗೆಸಿದ ಕಾರಣ ಗಲಾಟೆ ಮಾಡಿರುತ್ತಾರೆ, ಆಗ ಭಾನುಪ್ರಕಾಶ್ ರವರ ಜಮೀನಿನಿಂದ ಪ್ರತಿವಾದಿಗಳ ಜಮೀನಿನ ಬೋರವೆಲ್ ಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಭಾನುಪ್ರಕಾಶ್ ರವರ ಜಮೀನಿನಲ್ಲಿ ಬೋರವೆಲ್ ಇರುತ್ತದೆ ಎಂದರೆ ಸರಿ. ನನ್ನ ಮತ್ತು ಭಾನುಪ್ರಕಾಶ್ ನಡುವೆ ವೈಮನಸ್ಯ ಇರುವುದಿಲ್ಲ ಎಂದರೆ ಸರಿ. ಒಂದು ವರ್ಷದ ಪಸಲನ್ನು ನಾವು ಪಡೆದುಕೊಂಡ ನಂತರ ದಾವಸ್ವತ್ತಿನ ವ್ಯವಸಾಯವನ್ನು ಪ್ರತಿವಾದಿಗಳು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನಾನು 3.5 ಲಕ್ಷ ಬೋಗ್ಯ ಹಣವನ್ನು ಜಮಾ ಮಾಡಿರುತ್ತೇನೆ, 2 ಲಕ್ಷದ ತಲಾ ಎರಡು ಚೆಕ್ ಗಳನ್ನು ನೀಡಿರುತ್ತೇನೆ. ಉಳಿದ ಹಣವನ್ನು ನಗದು ಮೂಲಕ ನೀಡಿರುತ್ತೇನೆ. ನಾನು ಯರಹಳ್ಳಿ ಖಾತೆಯ 2 ಚೆಕ್ ಗಳನ್ನು 3 ನೇ ಪ್ರತಿವಾದಿಗೆ ನೀಡಿರುತ್ತೇನೆ. ಅದು ನಗದಾಗಿರುತ್ತದೆ. ಸದರಿ ಚೆಕಗಳು ನನ್ನ ಖಾತೆಯಲ್ಲಿ ಹಣ ಇಲ್ಲದ ಕಾರಣ ನಾನು ವಾಪಸ್ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ನಲ್ಲಿ 3 ನೇ ಪ್ರತಿವಾದಿ ಹೆಸರನ್ನು ಬರೆದಿರುತ್ತೇನೆ. ಹಣ ವರ್ಗಾವಣೆಯಾಗಿರುತ್ತದೆ, ಅದರ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು 2 ಲಕ್ಷ ಹಣವನ್ನು ನಗದಾಗಿ ನೀಡಿರುತ್ತೇನೆ. ಸದರಿ ಹಣವನ್ನು ನಾನು ಎಸ್.ಬಿ.ಐ ಮತ್ತು ವಿಜಯ ಬ್ಯಾಂಕಿನಿಂದ ತೆಗೆದಿರುತ್ತೇನೆ. ಸದರಿ ಹಣ ತೆಗೆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಲು ನನಗೆ ತೊಂದರೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.